**ದಿನಾಂಕ ಃ 05.08.2023.**
**(ಸಾಕ್ಷಿಗೆ ಪ್ರಮಾಣವಚನ ಬೋದಿಸಲಾಯಿತು.)**
**ಪಿ ಡಬ್ಲ್ಯೂ - 1**

**ಮುಖ್ಯ ವಿಚಾರಣೆ ಃ ಅರ್ಜಿದಾರರ ಪರ ವಕೀಲರಿಂದ ಃ**

ನಾನು ಈ ಪ್ರಕರಣದಲ್ಲಿ ಅರ್ಜಿದಾರನಾಗಿದ್ದು ನನ್ನ ಮುಖ್ಯ ವಿಚಾರಣೆಯ ಪರವಾಗಿ ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿನ ಅಂಶಗಳು ಸತ್ಯವಾಗಿರುತ್ತವೆ.

**ಅರ್ಜಿದಾರರ ಪರ ವಕೀಲರ ವಿನಂತಿಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**ದಿನಾಂಕ ಃ 27.06.2025.**
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**
**ಪಿ.ಡಬ್ಲ್ಯೂ - 1**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ.ಜೆ.ಹೆಚ್.ಎಸ್.ಪಿ. ವಕೀಲರಿಂದಃ**

ನನ್ನ ಜಮೀನಿನ ಸರ್ವೆ ನಂ.36. ಆ ಜಮೀನಿನಲ್ಲಿ 15 ಗುಂಟೆ ಪ್ರದೇಶದಲ್ಲಿ ಎದುರುದಾರರು ಲೈನ್ ಎಳೆದಿದ್ದಾರೆ. ನನ್ನ ಜಮೀನಿನ ಅಪಮೌಲ್ಯಕ್ಕಾಗಿ ಎದುರುದಾರರು ನನ್ನ ಖಾತೆಗೆ 2,47,500/- ರೂ.ಗಳನ್ನು ಜಮಾ ಮಾಡಿದ್ದಾರೆ ಎಂದರೆ ಸರಿ. ಆ ಸಮಯದಲ್ಲಿ ನನ್ನ ಜಮೀನಿನಲ್ಲಿ ಯಾವುದೇ ರೀತಿಯ ಬೆಳೆ ಬೆಳೆಯುತ್ತಿರಲಿಲ್ಲ ಮತ್ತು ಯಾವುದೇ ಮರಗಳು ಇರಲಿಲ್ಲ, ಆ ಕಾರಣಕ್ಕೆ ನನಗೆ ಬೆಳೆ ನಷ್ಟವಾಗಿಲ್ಲ ಎಂದರೆ ಸರಿ.

2. ನನ್ನ ಜಮೀನಿನಲ್ಲಿ 1 ಗುಂಟೆ ಜಮೀನಿಗೆ ಲೈನ್ ಎಳೆಯುವ ಕಾಲಕ್ಕೆ ಬೆಲೆ 2,00,000/- ರೂ.ಗಳು ಇದೆ ಎಂದು ತೋರಿಸಲು ಇಲ್ಲಿ ದಾಖಲೆಯನ್ನು ಹಾಜರುಪಡಿಸಿಲ್ಲ. ಲೈನು ಹಾದು ಹೋಗಿರುವ ಜಮೀನು ಈಗಲೂ ನನ್ನ ಸ್ವಾಧೀನದಲ್ಲಿದೆ ಮತ್ತು ನಾನೇ ಅದರ ಮಾಲೀಕ ಎಂದರೆ ಸರಿ. ಎದುರುದಾರರು ನನ್ನ ಜಮೀನಿಗೆ ಲೈನು ಎಳೆಯುವ ಕಾಲಕ್ಕೆ ಇದ್ದ ಸೂಕ್ತ ಬೆಲೆಯನ್ನು ನೀಡಿದ್ದರೂ ಸಹ ಹೆಚ್ಚಿನ ಪರಿಹಾರ ಕೇಳಿ, ನಾನು ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಬಿ.ವಿ. ರೇಣುಕ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**